# ಕಾನನ

ಆಗಸ್ಟ್ 2015

## ನಿಸರ್ಗದೆಡೆಗೆ ಪಯಣ



BANNERUGHATTA

**WILDLIFE CONSERVATION GROUP**


# ಕಾನನ

ನಿಸರ್ಗದೆಡೆಗೆ ಪಯಣ



ಆಗಸ್ಟ್ 2015

BANNERUGHATTA WILDLIFE CONSERVATION GROUP



* ಮಣ್ಣು ಗಣಿತ
* ಬ್ಯಾರೊನೆಟ್ ಚಿಟ್ಟೆ
* ವಿನಾಶದ ಹಾದಿಯಲ್ಲಿ ಬಂಬಲ್ ಬೀ
* ಶ್ರಾವಣದ ಸೊಬಗು
* ಪ್ರಕೃತಿ ಬಿಂಬ


ಲೇಖಕರ ವೃಂದ

ಶಿವಕುಮಾರ್ .ಬಿ

ಶಂಕರಪ್ಪ .ಕೆ.ಪಿ

ರವಿಚಂದ್ರ .ಎಸ್.ವಿ

ಕಾರ್ತಿಕ್ .ಎ .ಕೆ

ವಿನ್ಯಾಸ

ಅಶ್ವಥ .ಕೆ.ಎನ್

ಛಾಯಾಚಿತ್ರ

ಕಾರ್ತಿಕ್ .ಎ .ಕೆ



# ಮಣ್ಣು ಗಣಿತ

ಕಬ್ಬಿಣದ ಕಡಲೆಯಂತಹ ಗಣಿತವನ್ನು ಪ್ರಕೃತಿಯ ಮಡಿಲಿನಲ್ಲಿ ಕುಳಿತು ಬಹುಬೇಗ ಚೆನ್ನಾಗಿ ಕಲಿಯಬಹುದು. ಗಣಿತವೋ, ಪ್ರಕೃತಿಯ ಒಳಗೇ ಇರುವುದೇ ಹೊರತೂ ಬೇರೆ ಎಲ್ಲಿಂದಲೋ ಬಂದಿಲ್ಲ. ಆದರೆ ನಮ್ಮ ಶಿಕ್ಷಕರು ಮಾತ್ರ ಪ್ರಕೃತಿಯಿಂದ ದೂರಸರಿದು ನಮಗೂ ಗಣಿತಕ್ಕೂ ಸಂಬಂಧ ಇಲ್ಲವೇ ಇಲ್ಲ ಎನ್ನುವ ರೀತಿ ಗಣಿತವನ್ನು ಮಕ್ಕಳಿಗೆ ಕಲಿಸುತ್ತಿರುವುದು ನಮ್ಮ ಶಿಕ್ಷಣಕ್ಕೆ ಅಂಟಿದ ದೋಷವೇ ಸರಿ. ಬಳಲುತ್ತಿರುವುದು ಮಾತ್ರ ನಮ್ಮ ಮಕ್ಕಳು.

ಆದರೆ ನಮ್ಮ ಶಾಲೆ ಪ್ರಕೃತಿಯ ಮಡಿಲಲ್ಲಿರುವುದು ನಮ್ಮೆಲ್ಲರ ಸೌಭಾಗ್ಯ. ಇಂತಹ ಪ್ರಕೃತಿಗೂ ಮತ್ತು ಗಣಿತಕ್ಕೂ ತುಂಬಾ ಅಂಟಿ ಕೊಂಡಂತಹ ಸಂಬಂಧವಿದೆ. ನಾವು ನಮ್ಮ ಮಕ್ಕಳ ಕಲಿಕೆಗಾಗಿ ತಿಂಗಳಿಗೆ ಒಂದು ಥೀಮ್ ಅನ್ನು ಆಯ್ದುಕೊಳ್ಳುತ್ತೇವೆ. ಆ ಥೀಮ್ ಗೆ ಕೆಲವು ಉದ್ದೇಶಗಳನ್ನು ಹಾಕಿ ಕೊಂಡು ಪರಿಕಲ್ಪನೆಗಳನ್ನು ಕಲ್ಪಿಸಿ ರೂಪಿಸಿ ಕಲಿಸುತ್ತೇವೆ. ಹಾಗೆಯೇ ನಾಲ್ಕನೇ ವರ್ಗದ ತರಗತಿಗೆ ಅಳತೆ ಎಂಬ ಉದ್ದೇಶವನ್ನು ಆಯ್ದು ಕೊಂಡೆವು.

ಅಳತೆ ಎಂಬ ಪಾಠದಲ್ಲಿ ತೂಕದ ಬಗ್ಗೆ ಹೇಳುವಾಗ ಕೆಲವು ತೂಕದ ಬಟ್ಟುಗಳನ್ನು ಮಾಡುವ ಸಮಯ ಬಂದಿತು. ನಾನು ಬಟ್ಟುಗಳನ್ನು ಮಾಡೋಣ ಎಂದ ತಕ್ಶಣ ಮಕ್ಕಳು ಎಲ್ಲರೂ ಕೂಗಿಕೊಂಡು ಸಂತೋಷಪಟ್ಟರು. ನಾನು ಯಾವುದರಿಂದ ಬಟ್ಟನ್ನು ತಯಾರಿಸಬಹುದು ಯಾರುಬೇಕಾದರು ಐಡಿಯ ಕೊಡಬಹುದು ಎಂದೆ. ನಾನು ಹೇಳಿದ ತಕ್ಷಣ ಪುನೀತನು ಸಾರ್ ಕಲ್ಲನ್ನು ಒಂದು ಡಬ್ಬದ ಒಳಗೆ ತುಂಬಬಹುದು ಎಂದ. ಭಾವನಳು ಮಣ್ಣನ್ನು ಕವರ್ ನಲ್ಲಿ ಕಟ್ಟಬಹುದು. ನಂತರ ವಿಷ್ಣು, ಸಾರ್ ಜೇಡಿ ಮಣ್ಣಿನಿಂದ ಮಾಡಬಹುದು ಎಂದು ತರಾವರಿ ಐಡಿಯಾ ಕೊಟ್ಟನು.



ನಾನು ಉತ್ತಮವಾದ ಐಡಿಯ ಎಂದು, ಸರಿ ಹಾಗಾದರೆ ನಾಳೆ Art and Craft ಪಿರೀಡ್ ನ ಮುಂಚೆ

ಮಣ್ಣನ್ನು ತೆಗೆದುಕೊಂಡು ರೆಡಿಯಾಗಿದ್ದರೆ ಬಟ್ಟನ್ನು ಮಾಡಬಹುದು ಎಂದೆ. ಹಾಗಾದರೆ ಜೇಡಿಮಣ್ಣು ಎಲ್ಲಿ ಸಿಗುತ್ತದೆ? ಎಂದು ಕೇಳಿದೆ. ತಕ್ಷಣ ಎಲ್ಲಾರು ಸಾರ್ ಶಿವಮಾದಣ್ಣ ಗಣೇಶ ಮಾಡ್ತ ಇದ್ರಲ್ಲ, ಸ್ವಾಮೀಜಿ ರೂಮ್ ಹಿಂದಗಡೆ ಎಂದರು. ನಾನು ಸರಿ ಹಾಗಾದರೆ ನಾಳೆ ಮಣ್ಣನ್ನು ತೆಗೆದುಕೊಂಡು ಬನ್ನಿ ನಾಳೆ ಮಾಡೋಣ ಎಂದೆ.

ಮಾರನೇ ದಿವಸ ಮೊದಲನೇ ಪಿರೀಡ್ ಮುಗಿಯುತ್ತಿದ್ದಂತೆ ಮಕ್ಕಳು ಆಸಕ್ತಿಯಿಂದ ಕೈಗಳನ್ನು, ಬಟ್ಟೆಗಳನ್ನು ಮಣ್ಣು ಮಾಡಿಕೊಂಡು ಸಾರ್ ಮಣ್ಣನ್ನು ತೆಗೆದುಕೊಂಡು ಬಂದಿದ್ದೇವೆ ಬನ್ನಿ ಸಾರ್. . . ಎಂದು ಕರೆದರು. ಸರಿ ಎಂದು ನಾನು ಹೋದೆ. ಮೊದಲು ನಾನು 50 ಗ್ರಾಂ ಬಟ್ಟನ್ನು ಮಾಡಲು ಹೇಳಿದೆ. ಒಂದು 50 ಗ್ರಾಂ ಸೋಪಿನ ತೂಕದ ಸಹಾಯದಿಂದ 50 ಗ್ರಾಂ ಮಣ್ಣನ್ನು ಅಳತೆ ಮಾಡಿ, ಬಟ್ಟು ಮಾಡಿ ತೋರಿಸಿದೆ. ನಂತರ 50 ಗ್ರಾಂ ಬಟ್ಟಿನ ಸಹಾಯದಿಂದ 100 ಗ್ರಾಂ ಬಟ್ಟನ್ನು ಮಾಡಲು ಹೇಳಿದೆ. ಆದರೆ ಆಕಾಶನು, ಸಾರ್ 100 ಗ್ರಾಂ ಸೋಪ್ ಕೊಡಿ ಸಾರ್ ಎಂದ! ಆದರೆ ನಾನು 50 ಗ್ರಾಂ ಬಟ್ಟಿನಿಂದ 100 ಗ್ರಾಂ ಬಟ್ಟನ್ನು ಮಾಡಬಹುದು ಎಂದ ತಕ್ಷಣ ಭಾವನ ಸಾರ್ 50 ಗ್ರಾಂ ಬಟ್ಟಿಗೆ ಹಾಕಿದ ಮಣ್ಣಿನ 2 ಪಟ್ಟು ಮಣ್ಣನ್ನು ಹಾಕುವುದು ಎಂದಳು. ನಾನು ಗುಡ್ ಎಂದು ಹೇಳಿ ಹಾಗಾದರೆ 250 ಗ್ರಾಂ ಬಟ್ಟನ್ನು ತಯಾರಿಸಲು....ಎಂದೆ. ತಕ್ಷಣ ಅನುಶ್ರೀ, ರಾಧ, ಪುನೀತ, ಭಾವನ ಇನ್ನು ಕೆಲವರು ಬೆರಳಿನಿಂದ ಎಣಿಸುತ್ತ 50, 100, 100ಕ್ಕೆ 50 ಸೇರಿಸಿದರೆ 150, 200, 250, ಎಂದು. 1, 2, 3, 4, 5, ಬೆರಳುಗಳನ್ನು ಎಣಿಸುತ್ತಾ ಸಾರ್ ಐದು ಪಟ್ಟು. ಎಂದು ಹೇಳಿದರು. ಇನ್ನು ಕೆಲವರು ಸಾರ್ 100 ಗ್ರಾಂ ಬಟ್ಟನ್ನು ಎರಡು ಹಾಕಿದರೆ 200 ಗ್ರಾಂ, ಜೊತೆಗೆ 50 ಗ್ರಾಂ ಹಾಕೋಣ ಎಂದರು! ನಾನು ಅದೂನೂ ಹಾಗ ಬಹುದು ಗುಡ್ ಎಂದು ಹೇಳಿದೆ. ನಂತರ ಮಕ್ಕಳು 500 ಗ್ರಾಂ 1kg ಬಟ್ಟನ್ನು ತಯಾರಿಸಿದರು. ತಯಾರಿಸುವಾಗ ಧನುಶ್ ಮತ್ತು ಪ್ರಜ್ವಲ್ ಬಟ್ಟಿನ ಮಾದರಿಯನ್ನು ಒಬ್ಬಟ್ಟು, ಚಪಾತಿಯ ಹಾಗೆ ತಟ್ಟಿದ್ದರು. ಇದನ್ನು ನೋಡಿ ಕೆಲವರು ನಗುತ್ತಾ ಆಡಿಕೊಳ್ಳುತ್ತಿದ್ದರು. ಕೀರ್ತನ, ಕಾವ್ಯ ಮುಂತಾದವರು ತ್ರಿಭುಜ, ಆಯತ, ವೃತ್ತ ಮತ್ತು ಅವರಿಗೆ ಇಷ್ಟ ಬಂದ ಆಕಾರಗಲ್ಲಿ ತೂಕದ ಬಟ್ಟುಗಳನ್ನು ತಯಾರಿಸಿದ್ದರು.



ಅದರಲ್ಲಿ ಪ್ರಜ್ವಲನು ಸಾರ್. . . ಕಾವ್ಯ ತ್ರಿಭುಜ ಆಕಾರದಲ್ಲಿ ಬಟ್ಟನ್ನು ಮಾಡಿದ್ದಾಳೆ. ಅದು ವೃತ್ತಾಕಾರದಲ್ಲಿ ಇಲ್ಲ ಅದು 250 ಗ್ರಾಂ ಬರೋದಿಲ್ಲ ಎಂದನು. ವಂದನಳು ಸಾರ್ ಪಲ್ಲವಿ 50 ಗ್ರಾಂ ಬಟ್ಟನ್ನು ಸೋಪಿನ ತರ ಮಾಡಿಲ್ಲ ಎಂದಳು. ಅಜಯ ಸಾರ್. . 50 ಗ್ರಾಂ ಸೋಪಿನ ತರ ದಪ್ಪವಾಗಿ 50 ಗ್ರಾಮ್

ಬಟ್ಟು ಇಲ್ಲ ಯಾಕೆ ಸಾರ್ ಎಂದನು. ನಾನು ಮಣ್ಣು ಸೋಪಿಗಿಂತ ಹೆಚ್ಚು ಕಣಗಳನ್ನು ಹೊಂದಿರುತ್ತದೆ ಎಂದು ಹೇಳಿದೆ. ಮತ್ತೇ ನಾನು ಹಾಗಾದರೆ 1kg ಪೇಪರ್ ಹೆಚ್ಚು ತೂಕವಿದಿಯೋ, ಅಥವಾ 1kg ಕಬ್ಬಿಣ ಹೆಚ್ಚು ತೂಕವಿದಿಯೋ ಎಂದು ಕೇಳಿದೆ. ಎಲ್ಲಾರು ಕಬ್ಬಿಣ ಹೆಚ್ಚು ತೂಕವಿರುತ್ತದೆ ಎಂದರು. ನಾನು ಕಬ್ಬಿಣ ಮತ್ತು ಪೇಪರ್ ಅನ್ನು ಅಲ್ಲಿಯೇ ತೂಕ ಮಾಡಿಸಿ ನೋಡಿಸಿದಾಗ ಅವರಿಗೆ ಅರ್ಥವಾಯಿತು. ಅಷ್ಟೊತ್ತಿಗೆ ಎಲ್ಲರು ಅವರದೇ ಆದ ತೂಕ ಮತ್ತು ಬೇರೆ ಬೇರೆ ಆಕಾರಗಳಲ್ಲಿ ಬೇರೆ ಬೇರೆ ಪ್ರಮಾಣದ ಬಟ್ಟುಗಳನ್ನು ಮಾಡಿ ತಯಾರಿಸಿಕೊಂಡು ಬಿಸಿಲಿನಲ್ಲಿ ಒಣಗಿಸುತ್ತಾ ಕುಳಿತ್ತಿದ್ದರು. ಸಾರ್ ಆಗಿದೆ, ಸಾರ್ ಆಗಿದೆ ಅಂತ ಪದೇ ಪದೇ ನಾನು ನೋಡುವ ತನಕ ಹೇಳುತ್ತ ಕುಳಿತ್ತಿದ್ದರು. ಕೆಲವರು ಬೇರೆಯವರು ಮಾಡಿರುವ ಬಟ್ಟುಗಳನ್ನು ಹಂಗಿದೆ ಹಿಂಗಿದೆ ಅಂತ ಆಡಿಕೊಳ್ಳುತ್ತಾ ತಮ್ಮದೇ ಎಲ್ಲಾರಿಗಿಂತ ಚೆನ್ನಾಗಿದೆ ಎಂದು ಹೇಳುತ್ತಾ ಮುಖವನ್ನೆಲ್ಲಾ ಮಣ್ಣು ಮಾಡಿಕೊಂಡು ಕೆಸರಿನಲ್ಲಿ ಬಿದ್ದ ಹಾಗೆ ಬಟ್ಟನ್ನು ಒಣಗಿಸುತ್ತಾ ತರಲೆಗಳನ್ನು ಮಾಡುತ್ತಾ ಕುಳಿತ್ತಿದ್ದರು. ಅಷ್ಟರಲ್ಲಿ ಸಮಯ ಮುಗಿದಿದ್ದರಿಂದ ಎಲ್ಲರೂ ಹೋಗಿ ಕೈ ತೊಳೆದು ಬನ್ನಿ ಎಂದೆ. ತಕ್ಷಣ ಎಲ್ಲರೂ ಅವರ ಕೈಯಲ್ಲಿರುವ ಮಣ್ಣನ್ನು ಒಬ್ಬರಿಗೊಬ್ಬರು ಬಳಿಯುತ್ತಾ ಸಂತೋಷದಿಂದ ಓಡಿದರು.



ಕೋಟ್ಯಾಂತರ ವರ್ಷಗಳಿಂದ ವಾತವರಣದ ತಾಪದ ಏರಿಳಿತಕ್ಕೆ, ಹಿಗ್ಗಿ ಕುಗ್ಗಿದ ಬಂಡೆಕಲ್ಲುಗಳು ಶಿತಲಗೊಳ್ಳುತ್ತವೆ. ಬೀಸುವ ಗಾಳಿಗೆ, ಹರಿಯುವ ನೀರಿನ ರಬಸಕ್ಕೆ ಶಿತಲಗೊಂಡ ಕಲ್ಲು ಸವೆದು ಸಣ್ಣ ಸಣ್ಣ ಕಲ್ಲಿನ ಪುಡಿಯಾಗುತ್ತದೆ. ಸಸ್ಯಗಳ ಬೇರುಗಳು ಕಲ್ಲಿನ ಮೇಲೆ ಬೆಳೆಯುವುದರಿಂದ ಕಲ್ಲು ಸಡಿಲಗೊಂಡು ಮಣ್ಣು ಆಗುತ್ತದೆ. ಪ್ರಾಣಿಗಳು ಕಲ್ಲಿನ ಮೇಲೆ ಚಲಿಸುವುದರಿಂದ ಕಲ್ಲು ಸಡಿಲಗೊಂಡು ಮಣ್ಣು ಉಂಟಾಗುತ್ತದೆ. ಕಸ ಕಡ್ಡಿಗಳು ಕಲ್ಲಿನ ಜೊತೆ ಸೇರಿ ಮಣ್ಣಿನ ಫಲವತ್ತತೆ ಹೆಚ್ಚಿಸುತ್ತದೆ.



ಇಂತಹ ಮಣ್ಣು ನೀರಿನಲ್ಲಿ ಕೊಚ್ಚಿಹೋಗಿ ಒಂದು ಕಡೆ ಶೇಖರಣೆಗೊಂಡು ನೀರೆಲ್ಲಾ ಆವಿಯಾಗಿ ತಳದಲ್ಲಿ ಮಣ್ಣು ಉಳಿಯುತ್ತದೆ, ಇಂತಹ ಮಣ್ಣು ಜೇಡಿಮಣ್ಣು ಆಗುತ್ತದೆ. ಈ ಮಣ್ಣು ತುಂಬಾ ಮೆದುವಾಗಿರುತ್ತದೆ ಆದ್ದರಿಂದ ಕೆಲವು ಮಾದರಿಗಳನ್ನು ಮಾಡಬಹುದು.

ಈ ಮಣ್ಣಿನಲ್ಲಿ ಸೋಡಿಯಂ, ಮೆಗ್ನಿಷಿಂ ಕ್ಯಾಲ್ಸಿಯಂ, ನಂತಹ ಧಾತುಗಳಲ್ಲದೆ ಕೆಲವು ಉಪಯುಕ್ತ ಬ್ಯಾಕ್ಟೀರಿಯಗಳು ಸಹ ಇರುತ್ತವೆ. ಇಂತಹ ಮಣ್ಣನ್ನು ಮಕ್ಕಳು ಮುಟ್ಟಿ ಕಲಸಿ ಆಡುವುದರಿಂದ ಮುಂದೆ ರೋಗ ನಿರೋಧಕ ಶಕ್ತಿ ಹೆಚ್ಚಿ ಆರೋಗ್ಯ ಉತ್ತಮವಾಗಿರುತ್ತದೆ. ಮಕ್ಕಳು ತಾವೇ ಮಾಡಿ ಕಲಿಯುವುದರಿಂದ ಮನಸ್ಸಿಗೆ ಉಲ್ಲಾಸ ಕೊಡುತ್ತದೆ. ಹೀಗೆ ಪ್ರಕೃತಿಯಲ್ಲಿ ಸಿಗುವ ಕೆಲವು ವಸ್ತುಗಳನ್ನು ಬಳಸಿಕೊಂಡು ಗಣಿತ ವಿಷಯವನ್ನು ಕಲಿಯುವುದರಿಂದ ಗಣಿತದ ಬಗ್ಗೆ ಹೆಚ್ಚು ಆಸಕ್ತಿಯೂ ಮೂಡುತ್ತದೆ.

- ಶಿವಕುಮಾರ್ .ಬಿ

ಎಸ್.ಆರ್.ವಿ.ಕೆ ಶಾಲೆ, ಶಿವನಹಳ್ಳಿ.






## BARONET

## *Euthalia nais*

ಶ್ರಾವಣದ ಆಗಮನವಾಗಿ ಪ್ರಕೃತಿಯಲ್ಲಿ ಅವರ್ಣನೀಯ ಬದಲಾವಣೆಗಳು ಉಂಟಾಗಿದ್ದವು ಮರ-ಗಿಡಗಳು ಮಳೆಯಲ್ಲಿ ನೆನೆದು ಹಸಿರಾಗಿದ್ದವು ಸಂಜೆಯಾಗುತ್ತಲೆ ತಂಪಾಗುತ್ತಿದ್ದ ವಾತಾವರಣಕ್ಕೆ ಜನ ಮೂಲೆಯಲ್ಲಿ ಮುದುರಿಸುತ್ತಿ ಮಡಗಿದ್ದ ಜರ್ಕೀನು ಸ್ವೆಟರ್ ಗಳನ್ನು ಹಾಕಿಕೊಂಡು ಓಡಾಡ ತೊಡಗಿದ್ದರು. ಮುಂಜಾನೆಯೇ ತನ್ನ ಎನ್ ಪೀಲ್ಡ್ ಗಾಡಿಯ ಮೇಲೆ ಬುಡು ಬುಡು ಸದ್ದು ಮಾಡಿ ದೀಪು ಬಂದನು. ನಮಗೆ ಹೊಸ ಸುದ್ದಿಯೊಂದ್ದನ್ನು ತಂದಿದ್ದ. ಇವನು ದೊಡ್ಡಿ ಬೆಟ್ಟದ ಮೇಲೆ ಅವನ ಜೀವನದಲ್ಲೇ ಎಂದೂ ನೋಡಿರದ ಯಾವುದೋ ವಿಚಿತ್ರ ಕಪ್ಪೆಯೊಂದನ್ನು  ನೋಡಿದ್ದನಂತೆ. ‘ನೀವು ನೋಡಲು ಬರುತ್ತೀರಾ ಎಂದು ಕರೆದ ’.

“ಲೋ, ದೀಪು ನೀನು ನೋಡಿದ ಕಪ್ಪೆ ಮರಿ ನಾವು ಬಂದು ನೋಡೋವರೆಗೂ ಅಲ್ಲೇ ಕುಂತಿರುತ್ತಾ?”. ಎನ್ನುತ್ತಾ ಕಾಡಿಗೆ ಹೋಗಲು ನಮಗೂ ಒಂದು ನೆಪ ಸಿಕ್ಕಿ ದೊಡ್ಡಿ ಬೆಟ್ಟದ ದಾರಿಯಲ್ಲಿ ನಡೆದು ಬಿಟ್ಟೆವು. ಆಲದ ಮರದ ಮೇಲೆ ಹಣ್ಣು ತಿನ್ನುತ್ತಾ ಕುಳಿತ್ತಿದ್ದ *ಕೆಂಪುತಲೆ ಗಿಳಿ*ಗಳ ಗುಂಪು ನಮ್ಮ ಸದ್ದನ್ನು ಕೇಳಿ ಹಾರಿಹೋದವು.

ನಮ್ಮ ಮುಂದೆಯೇ ಬಯಲಿನಲ್ಲಿ ಯಾವುದೋ ಕೆಂಪನೆಯ ಹಕ್ಕಿ ಹಾರಿದ ಹಾಗೆ ಆಯಿತು. ಈ ಅಯಕಟ್ಟಿನಲ್ಲೇ ನಾನು ಕಳೆದ ಬಾರಿ ಕೆಂಡದ ಬಣ್ಣದ ರೆಡ್ ಮುನಿಯ ಹಕ್ಕಿಯನ್ನು ಪೋಟೋ ತೆಗೆದಿದ್ದು ಜ್ಞಾಪಕಕ್ಕೆ ಬಂದು ಕಣ್ಣಾಡಿಸಿದೆ. ನೆಲದ ಮೇಲೆ ತನ್ನ ಎರಡು ರೆಕ್ಕೆಗಳನ್ನು ಅಗಲಿಸಿ ಕುಳಿತ್ತಿದ್ದ ಕೆಂಬಣ್ಣದ ಚಿಟ್ಟೆ ಕಾಣಿಸಿತು. ಅದರ ಮೇಲಿನ ರೆಕ್ಕೆಯ ಮುಂಭಾಗ ಮತ್ತು ಅಂಚು ಕಪ್ಪಾಗಿತ್ತು. ತಳಭಾಗದ ಅಂಚಿನಲ್ಲಿ ಕಪ್ಪು ಮಚ್ಚೆಗಳಿದ್ದವು ಕೆಳ ರೆಕ್ಕೆಯ ಅಂಚಿನಲ್ಲಿ ಅಡ್ಡವಾದ ಸಾಲು ಸಾಲು ಕಪ್ಪು ಚುಕ್ಕೆಗಳಿದ್ದವು. ಇದನ್ನು ಕ್ಲಿಕ್ಕಿಸಿ ಎಲ್ಲರಿಗೂ ತೋರಿಸಿದೆ ಈ ಸುಂದರ ಚಿಟ್ಟೆಯ ಹೆಸರು *ಬ್ಯಾರಾನೆಟ್ ಚಿಟ್ಟೆ* ಎಂದು ಅಶ್ವತ್ ರವರು ತಿಳಿಸಿ ಕೊಟ್ಟರು. ಗುಡ್ಡ ಗಾಡುಗಳಲ್ಲಿ ಕುರುಚಲು ಕಾಡಿನ ಬಯಲಿನಲ್ಲಿ ಮೇಲೆ ಕೆಳಗೆ ತಿಕ್ಕಲು ತಿಕ್ಕಲಾಗಿ ನೆಲ ಮಟ್ಟದಲ್ಲಿ ಹಾರುತ್ತಾ ಕುಂತಲ್ಲಿ ಕೂರದೆ ಹಾರುತ್ತದೆ. ಹೀಗೆ ಹಾರಿದ ಬ್ಯಾರಾನೆಟ್  ಚಿಟ್ಟೆಯು ಹತ್ತಿ ಮರದ ಕೆಳಗೆ ಉದುರಿ ಕೊಳೆತ್ತಿದ್ದ ಹಣ್ಣಿನ ಬಳಿ ಹೋಗಿ ಕುಳಿತುಕೊಂಡಿತು.

ದಕ್ಷಿಣ ಭಾರತ ಮತ್ತು ಹಿಮಾಯಲದ ತಪ್ಪಲು ಹಾಗೂ ಶ್ರೀಲಂಕಾ, ನೇಪಾಳದಲ್ಲಿ ಈ ಚಿಟ್ಟೆ ಕಾಣ ಸಿಗುತ್ತದೆ ಎಂದು ಮಾತನಾಡುತ್ತಾ ದೊಡ್ಡಿ ಬೆಟ್ಟದ ತುದಿ ತಲುಪೇ ಬಿಟ್ಟೆವು.



"ಸರಿ ಎಲ್ಲಿ ತೋರಿಸಪ್ಪಾ ನಿನ್ನ ಹೊಸ ಕಪ್ಪೆಯನ್ನೂ ದೀಪೂ. . ." ಎಂದು ರೇಗಿಸಿದೆವು. ಬಂಡೆಯ ಮೇಲೆ ಕೊರಕಲಿನಲ್ಲಿ ಗೊಜ್ಜಗೆ ನಿಂತ್ತಿದ್ದ ಪಾಚಿ ಬರಿತ ನೀರಿನತ್ತ ಕೈ ಮಾಡಿ ತೊರಿಸಿದ. ಅಲ್ಲಿ ಹುಡುಕಿದರೇ ಕೆಲ ಗೊದ್ದ ಮರಿಗಳನ್ನು ಬಿಟ್ಟರೇ ಇನ್ನೇನೂ ಇರಲ್ಲಿಲ್ಲ. ಸ್ವಲ್ಪ ದೂರದಲ್ಲಿ ಕಲ್ಲಿನ ಪೊಟರೆಯಲ್ಲಿ ಅವಿತು ಕುಳಿತ್ತಿದ್ದ ಆ ಹೊಸ ಕಪ್ಪೆಯನ್ನು ದೀಪುವೇ ಕಂಡು ನಮ್ಮನ್ನು ಕರೆದ.

"ಇಲ್ಲಿ ಇಷ್ಟಗಲದಲ್ಲಿ ಒಂದು ಕಪ್ಪೆ ಇದೆ ಕಂಡು ಹಿಡಿಯಿರಿ ನೋಡೋಣ?" ಎಂದು ನಮಗೆ ಸವಾಲು ಹಾಕಿದ !.

ಕಲ್ಲಿನ ರಚನೆಯ ಬಣ್ಣಕ್ಕೆ ಹೊಂದಿಕೊಳ್ಳುವಂತೆ ತನ್ನ ಮೈಬಣ್ಣವನ್ನು ಮಾರ್ಪಾಡುಮಾಡಿಕೊಂಡು ಕುಳಿತಿದ್ದ ಕಪ್ಪೆಯನ್ನು ನಮಗೆ ದೀಪುವು ಬೆರಳು ಮಾಡಿ ತೋರಿಸುವವರೆಗು ನಮಗೆ ಕಾಣಿಸಲೇ ಇಲ್ಲ. ನೋಡಿದರೇ ನಮಗೆ ಚಿಕ್ಕರಾಗಿಹಳ್ಳಿ ಬೆಟ್ಟದ್ದಲ್ಲಿ ಕಾಣಿಸಿಕೊಂಡಿದ್ದ ಬಹು ಅಪರೂಪದ *ಘಂತೂರ್ ಕಪ್ಪೆಯ* ಮರಿ ಕಪ್ಪೆಯಾಗಿತ್ತು. ಈ ಘಂತೂರ್ ಕಪ್ಪೆಯ ಕಪಟ ರೂಪವ ಕಂಡು ನಾವೆಲ್ಲಾ ಬೆರಗಾಗಿ ಹೋದೆವು.

- ಶಂಕರಪ್ಪ .ಕೆ .ಪಿ



# ವಿನಾಶದ ಹಾದಿಯಲ್ಲಿ ಬಂಬಲ್ ಬೀ



ಹೆಚ್ಚುತ್ತಿರುವ ಜಾಗತಿಕ ತಾಪಮಾನದಿಂದ ಬಂಬಲ್ ಬೀಗಳು ತಮ್ಮ ಆವಾಸ ಸ್ಥಾನವನ್ನು ಕಳೆದುಕೊಳ್ಳುತ್ತಿದೆ. ಒಂದು ಅಧ್ಯಯನದ ಪ್ರಕಾರ ಬಂಬಲ್ ಬೀ ತಮ್ಮ ಆವಾಸ ಸ್ಥಾನವನ್ನು ದಕ್ಷಿಣ ಅಮೇರಿಕ ಪ್ರದೇಶದಿಂದ ಕಣ್ಮರೆಯಾಗುತ್ತಿದೆ, ಇನ್ನೊಂದು ಅಧ್ಯಯನದ ಪ್ರಕಾರ ಉತ್ತರ ಅಮೇರಿಕ ಪ್ರದೇಶದ ಬಂಬಲ್ ಬೀ ಗಳು ತಮ್ಮ ಆವಾಸಸ್ಥಾನವನ್ನು ಇನ್ನು ಎತ್ತರದ ತಂಪಾದ ಕಡೆಗೆ ಪ್ರದೇಶಗಳಿಗೆ ವಲಸೆ ಬದಲಿಸಿಕೊಳ್ಳುತ್ತಾ ಹೋಗುತ್ತಿವೆ, ಇದರಿಂದ ತಾಪಮಾನದ ಬದಲಾವಣೆಯ ನೇರ ಪರಿಣಾಮದಿಂದ ದಿನೆ ದಿನೆ ಜೇರುಂಡೆಗಳ ಸಂಖ್ಯೆ ಕ್ಷಿಪ್ರಗತಿಯಲ್ಲಿ ಇಳಿಮುಖವಾಗುತ್ತಿದೆ.



ಪರಾಗಸ್ಪರ್ಶ ಕ್ರಿಯೆಯಲ್ಲಿ ರೈತರಿಗೆ ಈ ಜೇರುಂಡೆಗಳು ತುಂಬಾ ಉಪಯೋಗಕಾರಿಯಾಗಿವೆ. ವಿಜ್ಞಾನಿಗಳು ಬಂಬಲ್ ಬೀ ಗಳ ಸಂಖ್ಯೆ ಜಾಗತಿಕ ತಾಪಮಾನದಿಂದ ಕ್ಷೀಣಿಸುತ್ತಿಯೆಂದು ಮೊದಲೇ ತಿಳಿಸಿದ್ದರು, ಇದರ ಪರಿಣಾಮ ಮುಂದೆ ವ್ಯವಸಾಯಕ್ಕೂ ತೊಂದರೆಯಾಗುತ್ತಿದೆ ಎಂದು ಮುನ್ನೆಚ್ಚರಿಕೆಯನ್ನು ಕೊಟ್ಟಿದ್ದರು, ಈಗಲೇ ರಾಸಾಯನಿಕಗಳ ಬಳಕೆಯಿಂದ ಕೀಟಗಳಿಗೆ ತುಂಬಾ ಹಾನಿಯಾಗಿದೆ, ಈಗ ಇದರ ಜೊತೆಗೆ ಈ ತಾಪಮಾನದಲ್ಲಿ ಉಂಟಾಗಿರುವ ಹೆಚ್ಚಳ ಜೇರುಂಡೆ ಜೀವಕ್ಕೆ ಕಂಟಕವಾಗಿದೆ.

ಕೆನಾಡದ ಒಟ್ಟಾವ ವಿಶ್ವವಿದ್ಯಾನಿಲಯದ “ಜೆರ್ಮಿ ಕೆರ್” ಎಂಬ ಪರಿಸರಶಾಸ್ತ್ರಜ್ಞರ ಪ್ರಕಾರ ಇದು ಭವಿಷ್ಯದ ದೃಷ್ಟಿಯಿಂದ ತುಂಬಾ ಅನಾಹುತಕಾರಿ.

ಕೆರ್ ಮತ್ತು ಅವನ ತಂಡದ ಸದಸ್ಯರು ಸೇರಿ ಕೀಟಗಳನ್ನು ಕೀಟ ಸಂಗ್ರಹಗಾರದಿಂದ ಮತ್ತು ಅನೇಕ ಪ್ರದೇಶಗಳಿಂದ ಸಂಗ್ರಹಿಸಿ ಸಾವಿರಾರು ಬಂಬಲ್ ಬೀಗಳ ಅಂಕಿ-ಅಂಶಗಳು ಪಡೆದಿದ್ದಾರೆ. ಅಲ್ಲದೆ ಇವೆಲ್ಲವು 1901 ಹಾಗೂ 2010 ರ ಉತ್ತರ ಅಮೇರಿಕ ಮತ್ತು ಯೂರೋಪಿನದ್ದು ಎನ್ನುವುದು ವಿಶೇಷವಾದದ್ದು. ಇದರಲ್ಲಿ 67 ಪ್ರಬೇದದ ಬಂಬಲ್ ಬೀಗಳು ಸೇರಿದೆ, ಇದರಿಂದ ಅವುಗಳ ವಲಸೆಯನ್ನು ತಿಳಿಯಲು ಅನೂಕೂಲವಾಗುತ್ತದೆ. 1907 ರಿಂದ 2010 ರವರೆಗೆ ಬಂಬಲ್ ಬೀ ಗಳು ಉತ್ತರ ಅಮೇರಿಕಾ, ಯೂರೋಪಿನಲ್ಲಿ ವಾಸವಿದ್ದವು. ಜಾಗತಿಕ ತಾಪಮಾನದ ಏರಿಕೆಯು ಸುಮಾರು 2.5 ಡಿಗ್ರಿ ಸೆಲ್ಸಿಯಸ್ ನಷ್ಟು ಹೆಚ್ಚಾದ್ದರಿಂದ ಈ ಅವದಿಯಲ್ಲಿ ಬಂಬಲ್ ಬೀ ಗಳು ಸುಮಾರು 300 ಕಿ ಮೀ ಉತ್ತರದ ತಂಪಾದ ತಾಣಕ್ಕೆ ವಲಸೆ ಹೋಗಿವೆ. ಇದರಿಂದ ದಕ್ಷಿಣ ಅಮೇರಿಕಾದ ಹೊಲಗಳಲ್ಲಿ ಬಂಬಲ್ ಬೀಗಳ ಸಂಖ್ಯೆ ನಶಿಸಿದೆ ಇದರರೊಂದಿಗೆ ಬಂಬಲ್ ಬೀಗಳು ಬೆಟ್ಟ ಪ್ರದೇಶಗಳಿಗೆ ವಲಸೆ ಹೋಗುತ್ತಿವೆ, ಅಲ್ಲದೆ ತಾಪಮಾನದ ಸಲುವಾಗಿ ತಮ್ಮ ಹಾರಾಟವನ್ನು 300 ಮೀ ಎತ್ತರಕ್ಕೆ ಹೆಚ್ಚಿಸಿವೆ.





ಇನ್ನೊಂದು ಕಡೆ ಬಂಬಲ್ ಬೀಗಳು ಉತ್ತರ ಅಮೇರಿಕಾದ ಅವಾಸಸ್ಥಾನವನ್ನು ಬದಲಿಸದೆ ಅಲ್ಲಿಯೇ ಉಳಿಯುತ್ತಿವೆ, ಇದು ಜೀವವೈವಿದ್ಯಕ್ಕೆ ತೊಂದರೆ ಉಂಟಾಗುತ್ತದೆ ಎಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

- ರವಿಚಂದ್ರ .ಎಸ್ .ವಿ



## ಶ್ರಾವಣದ ಸೊಬಗು

ದಾರದಾಂಗ ಹಾ ಕೂಗ್ಯಾದ
ಹಸಿರಕ್ಕಿ ಎಲೆಮ್ಯಾಲೆ
ಬಾನಾಗ ಜಿಗಿದಿ
ಕುಣಿದೈತಿ ಕಾಜಾಣ

ಬೋರು ಹುಣಸೆಯ ಮರದಾಗಾ
ಐಯೋರಾದ ಸುರಗಾನ
ಹಸಿರುಟ್ಟು ನಲಿದವಳೆ
ನಮ್ಮೌವ್ವ ಅತ್ತಿ-ಮರರಾಣಿ

ಶ್ರಾವಣದ ಬೆಳಕೇ ಬೆಳಕು
ಗಾಳಿ ಸೋಂಕಿಂಗೆ ಜೀವ ಝಂ !
ಕಿಲ ಕಿಲ ನಗುತ್ತಿದೆ
ಹುಲ್ಲು ಗಿಡ ಬಳ್ಳಿ ಹೂವ್ವ

ಭೂಮಿಯ ಒಡಲಿನ ಬೀಜಕ್ಕೆ
ತಂಪುತಾಗಿ ಹಸಿರಾಗಿ
ಚಿಗುರೊಡೆದು ಬೆಳಕಾಗಿ
ಹಸಿರಾಯ್ತು ಜಗವೆಲ್ಲ ನಮ್ಮ ಮನ.

- ಶಂಕರಪ್ಪ .ಕೆ .ಪಿ




ಹಸಿರಲ್ಲಿ ಹಸಿರಾದ ಹಸಿರು ಜೇನ್ನೊಣ ಬಾಕ




ಹನಿಯಲ್ಲಿ ಮೂಡಿದ ಬೃಹತ್ ಕಾನನ

- ಕಾರ್ತಿಕ್.ಎ .ಕೆ